**PW-2**

**ಪಾಟೀ ಸವಾಲು ಃ ಎದುರುದಾರರ ಪರ ಶ್ರೀ ಆರ್.ಬಿ.ಪಿ ವಕೀಲರಿಂದ**

1. ಅಪಘಾತ ಕಾಲಕ್ಕೆ ನಾನು ಹಾಗೂ ನನ್ನ ತಂದೆ ಮುದಿಯಪ್ಪ ಸೇರಿ ಮೋಟಾರ್ ಸೈಕಲ್ ಮೇಲೆ ಕೊಪ್ಪಳದಿಂದ ಅಲ್ಲಾಪುರಕ್ಕೆ ಕೆಲಸಕ್ಕೆ ಹೊರಟಿದ್ದೆವು. ನನ್ನ ಹೆಸರಿನಲ್ಲಿ ಮೋಟಾರ್ ಸೈಕಲ್ ಇದೆ. ಆಗ ನಾನೇ ಮೋಟಾರ್ ಸೈಕಲ್ ಓಡಿಸುತ್ತಿದ್ದೆ. ಸದರಿ ಅಪಘಾತ ನನ್ನ ತಪ್ಪಿನಿಂದ ಆಯಿತು ಎಂದರೆ ಸರಿಯಲ್ಲ. ಲಾರಿ ಚಾಲಕನ ತಪ್ಪಿನಿಂದ ಆಯಿತು. ಆಗ ಸಮಯ ಬೆಳಗಿನ 8-00 ಗಂಟೆ ಆಗಿತ್ತು. ಲಾರಿ ತಪ್ಪಿನಿಂದ ಈ ಅಪಘಾತ ಆಯಿತು ಎಂದರೆ ಸರಿಯಲ್ಲ. ನಾನು ಗೌಂಡಿ ಕೆಲಸ ಮಾಡುತ್ತೇನೆ. ಅಪಘಾತವಾದ ನಂತರ ನಾನು ಜಿಲ್ಲಾ ಆಸ್ಪತ್ರೆಯಲ್ಲಿ ಅಡ್ಮೀಟ್ ಆಗಿದ್ದೆ ಅಲ್ಲಿ 2 ತಿಂಗಳು ಇದ್ದೆ. ನಂತರ ಹೊಸಪೇಟೆಯಲ್ಲಿ ಒಂದು ವಾರ ಅಡ್ಮೀಟ್ ಆಗಿದ್ದೆ. ಅದರ ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ.

2. ಚಿಕಿತ್ಸೆಗೆ 3 ಲಕ್ಷ ರೂ.ಗಳು ಖರ್ಚು ಮಾಡಿದೆ ಎಂದು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ. ಇನ್ನೂ 2 ಲಕ್ಷ ಚಿಕಿತ್ಸೆಗೆ ಬೇಕು ಎಂದು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ. ಚಿಕಿತ್ಸೆ ಪಡೆದ ಕುರಿತು ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಸಂಪೂರ್ಣ ಅಪಘಾತ ನನ್ನ ತಪ್ಪಿನಿಂದ ಆಯಿತು ಎಂದರೆ ಸರಿಯಲ್ಲ. ವಿಮೆ ಕಂಪನಿಯವರು ಪರಿಹಾರ ಕೊಡುವ ಹೊಣೆಗಾರಿಕೆ ಹೊಂದಿಲ್ಲ ಎಂದರೆ ಸರಿಯಲ್ಲ.

3. ಅಪಘಾತವು ನಾನು ಹೋಗುತ್ತಿದ್ದ ರಸ್ತೆಯ ಎಡಬದಿಯಲ್ಲಿ ಆಗಿರುತ್ತದೆ. ನಾನು ವೈದ್ಯರ ಹತ್ತಿರ ಅಂಗನ್ಯೂನತೆ ಪ್ರಮಾಣ ಪತ್ರ ಪಡೆದಿಲ್ಲ. ಚಿಕಿತ್ಸೆ ಪಡೆದು ಬಂದ ನಂತರ ಮತ್ತೆ ಆಸ್ಪತ್ರೆಗೆ ಹೋಗಿಲ್ಲ ಎಂದರೆ ಸರಿ. 50% ಅಂಗನ್ಯೂನತೆ ಎಂದು ಸೃಷ್ಟಿ ಮಾಡಿ ದಾಖಲು ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಈಗಲೂ ಗೌಂಡಿ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ಈಗ ನಾನೇ ಅಡ್ಡಾಡುತ್ತೇನೆ ಮತ್ತು ನನ್ನ ಕೆಲಸ ನಾನೇ ಮಾಡಿಕೊಳ್ಳುತ್ತೇನೆ ಎಂದರೆ ಸರಿ.

**PW-2**

**<u>ಮರು ವಿಚಾರಣೆಃ ಇಲ್ಲ</u>**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಹಿರಿಯ ವ್ಯವಹಾರ ನ್ಯಾಯಾಧೀಶರು, ಕೊಪ್ಪಳ.**

**PW-1**

**<u>ಪಾಟೀ ಸವಾಲು ಃ ಎದುರುದಾರರ ಪರ ಶ್ರೀ ಆರ್.ಬಿ.ಪಿ ವಕೀಲರಿಂದ</u>**

1. ಅಪಘಾತ ಕಾಲಕ್ಕೆ ನಾನು ಹಾಗೂ ನನ್ನ ಮಗ ಮಂಜುನಾಥ ಸೇರಿ ನಮ್ಮ ಮಂಜುನಾಥನ ಹೆಸರಿನಲ್ಲಿ ಇರುವ ಮೋಟಾರ್ ಸೈಕಲ್ ಮೇಲೆ ಕೊಪ್ಪಳದಿಂದ ಅಲ್ಲಾಪುರಕ್ಕೆ ಕೆಲಸಕ್ಕೆ ಹೊರಟಿದ್ದೆವು. ಆಗ ನನ್ನ ಮಗ ಮಂಜುನಾಥ್ ಮೋಟಾರ್ ಸೈಕಲ್ ಓಡಿಸುತ್ತಿದ್ದ. ಸದರಿ ಅಪಘಾತ ನನ್ನ ಮಗ ಮಂಜುನಾಥನ ತಪ್ಪಿನಿಂದ ಆಯಿತು ಎಂದರೆ ಸರಿಯಲ್ಲ. ಲಾರಿ ಚಾಲಕನ ತಪ್ಪಿನಿಂದ ಆಯಿತು. ಆಗ ಸಮಯ ಬೆಳಗಿನ 8-00 ಗಂಟೆ ಆಗಿತ್ತು. ಲಾರಿ ತಪ್ಪಿನಿಂದ ಈ ಅಪಘಾತ ಆಯಿತು ಎಂದರೆ ಸರಿಯಲ್ಲ. ನಾನು ಗೌಂಡಿ ಕೆಲಸ ಮಾಡುತ್ತೇನೆ. ಅಪಘಾತವಾದ ನಂತರ ನಾನು ಜಿಲ್ಲಾ ಆಸ್ಪತ್ರೆಯಲ್ಲಿ ಅಡ್ಮೀಟ್ ಆಗಿದ್ದೆ ಅಲ್ಲಿ 3 ತಿಂಗಳು ಇದ್ದೆ. ಅದರ ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ.

2. ಚಿಕಿತ್ಸೆಗೆ 3 ಲಕ್ಷ ರೂ.ಗಳು ಖರ್ಚು ಮಾಡಿದೆ ಎಂದು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ. ಇನ್ನೂ 2 ಲಕ್ಷ ಚಿಕಿತ್ಸೆಗೆ ಬೇಕು ಎಂದು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ. ಚಿಕಿತ್ಸೆ ಪಡೆದ ಕುರಿತು ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಸಂಪೂರ್ಣ ಅಪಘಾತ ನನ್ನ ಮಗನ ತಪ್ಪಿನಿಂದ ಆಯಿತು ಎಂದರೆ ಸರಿಯಲ್ಲ. ವಿಮೆ ಕಂಪನಿಯವರು ಪರಿಹಾರ ಕೊಡುವ ಹೊಣೆಗಾರಿಕೆ ಹೊಂದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಹಿರಿಯ ವ್ಯವಹಾರ ನ್ಯಾಯಾಧೀಶರು, ಕೊಪ್ಪಳ.**